O.S. ನಂಬರಃ 23/2023
ಡಿ. ಡಬ್ಲ್ಯೂಃ 1

ದಿಃ 01-08-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ನಿಮ್ಮ ತಂದೆಯ ಪೂರ್ಣ ಹೆಸರು ಏನು ಎಂದರೆ ಸಾಕ್ಷಿಯು ಪೇಟು ನೂಣಾ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಎಲ್ಲೆ ವಾಸ್ತವ್ಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರದ್ದು ಬೇರೆ ಜಮೀನು ಇದ್ದು, ನಾವು ನಮ್ಮ ತಾಯಿಯ ಜೊತೆ ವಾಸ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮತಂದೆಯವರು ಯಾವ ಗ್ರಾಮದಲ್ಲಿ ವಾಸ್ತವ್ಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹಟ್ಟಿಕೇರಿಯಲ್ಲಿ ಎಂದು ನುಡಿಯುತ್ತಾರೆ. ಅವರದ್ದು ಎಷ್ಟು ಜಮೀನು ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ತಂದೆಯವರು ಅಲ್ಲಿ ಎಷ್ಟು ವರ್ಷಗಳತನಕ ವಾಸ್ತವ್ಯ ಮಾಡಿರುತ್ತಾರೆ ಎಂದರೆ ಮಾಹಿತಿ ಇರುವುದಿಲ್ಲ. ನೀವು ಅಲ್ಲಿಗೆ ಹೋಗಿದ್ದೇ ಇರುವುದಿಲ್ಲ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ತಂದೆಯ ಮನೆಯ ಹತ್ತಿರ ಹೋಗಿದ್ದೇ ಇರುವುದಿಲ್ಲ. ನಿಮ್ಮ ತಂದೆಯವರಿಗೆ ಎಷ್ಟು ಆಸ್ತಿ ಇತ್ತು ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ಹೆಸರು ಏನು ಎಂದರೆ ಸಾಕ್ಷಿಯು ಸಣ್ಣಮ್ಮ ಪೇಟು ನಾಯ್ಕ ಎಂದು ನುಡಿಯುತ್ತಾರೆ. ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 6 ಜನ ಮಕ್ಕಳು ಇದ್ದು, ಅದರಲ್ಲಿ 3 ಜನ

ಮರಣಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಇಬ್ಬರು ಮದುವೆಯಾದ ನಂತರ ಮೃತ ಪಟ್ಟಿದ್ದು, ಇನ್ನೊಬ್ಬ ಅವಿವಾಹಿತನಾಗಿ ಮೃತ ಪಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಬಾಕಿಯವರು ಅವರ್ಸಾದಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ. ನಿಮ್ಮ ತಾಯಿಯವರಿಗೆ ಒಟ್ಟು ಎಷ್ಟು ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ಒಟ್ಟು 15 ಗುಂಟೆ ಕ್ಷೇತ್ರದ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರು ಯಾವುದು ಎಂದರೆ ಸಾಕ್ಷಿಯ ನೆನಪಿರುವುದಿಲ್ಲ. ಹೆಗ್ಗಾರಮಕ್ಕಿ ಗದ್ದೆ ಆಸ್ತಿಯು ಮೊದಲು ಯಾರ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿಯ ಮತ್ತು ಚಿಕ್ಕಮ್ಮನ ಸ್ವಂತ ಆಸ್ತಿಯಾಗಿತ್ತು ಎಂದು ನುಡಿಯುತ್ತಾರೆ. ಅಲ್ಲಿ ಎಷ್ಟು ಜಮೀನು ಇತ್ತು ಎಂದರೆ ಸಾಕ್ಷಿಯು 3 ಎಕರೆ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೊದಲು ಯಾರ ಆಸ್ತಿಯಾಗಿತ್ತು ಎಂದರೆ ಸಾಕ್ಷಿಯು ನಮ್ಮ ತಾಯಿಯ ತಾಯಿಂದ ಬಂದ ಆಸ್ತಿ ಎಂದು ನುಡಿಯುತ್ತಾರೆ. ನಿಮ್ಮ ತಾಯಿಯ ತಾಯಿ ಹೆಸರು ಏನು ಎಂದರೆ ಗೊತ್ತಿರುವುದಿಲ್ಲ. ನಿಮ್ಮ ತಾಯಿಯ ತಾಯಿ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 2 ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡುಮಕ್ಕಳು ಎಂದು ನುಡಿಯುತ್ತಾರೆ. ಅವರ ಹೆಸರು ಏನು ಎಂದರೆ ಸಾಕ್ಷಿಯು ಸುರೇಶ, ಮೋಹನ್ ಅದರಲ್ಲಿ ಸುರೇಶ ಇವರು ಮರಣಪಟ್ಟಿರುತ್ತಾರೆ. ಹೆಣ್ಣುಮಕ್ಕಳ ಹೆಸರು ಏನು ಎಂದರೆ ಸುರೇಖಾ ಮತ್ತು ವನಿತಾ ಎಂದು ನುಡಿಯುತ್ತಾರೆ. ಅವರನ್ನು ಮದುವೆ ಮಾಡಿ ಕೊಟ್ಟಿರುತ್ತೇವೆ. ಎಷ್ಟನೇ ವರ್ಷದಲ್ಲಿ ಮದುವೆಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅವರು ಎಲ್ಲಿ ವಾಸ್ತವ್ಯ ಮಾಡುತ್ತಾರೆ ಎಂದರೆ ಸಾಕ್ಷಿಯು ಒಬ್ಬರು ಪುರ್ಲಕ್ಕಿಬೇಣದಲ್ಲಿ ಹಾಗೂ ಇನ್ನೊಬ್ಬರು

ಹೆಗ್ಗಾರಮಕ್ಕಿಗದ್ದೆಯಲ್ಲಿ ವಾಸ್ತವ್ಯ ಮಾಡುತ್ತಾರೆ. ಹೆಗ್ಗಾರಮಕ್ಕಿಗದ್ದೆಯಲ್ಲಿ ಏನು ಬೆಳೆಯನ್ನು ಬೆಳೆಯುತ್ತೀರಿ ಎಂದರೆ ಸಾಕ್ಷಿಯು ಗಿಡಮರಗಳನ್ನು ಹಾಕುವುದು ಮಾಡುತ್ತೇವೆ ಎಂದು ನುಡಿಯುತ್ತಾರೆ. ಹೆಗ್ಗಾರಮಕ್ಕಿಗದ್ದೆ ಜಮೀನು ಯಾರ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ಮಕ್ಕಳ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅದನ್ನು ಯಾವಾಗ ಪಾಲುಪಟ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು 15 ವರ್ಷಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಎಷ್ಟು ಎಷ್ಟು ಜಮೀನನ್ನು ನಿಮ್ಮ ಮಕ್ಕಳಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಒಬ್ಬರಿಗೆ 30 ಗುಂಟೆ, ಒಬ್ಬರಿಗೆ 20 ಗುಂಟೆ, ಮತ್ತು ಇನ್ನೊಬ್ಬರಿಗೆ 5 ಗುಂಟೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಹಿವಾಟಿ ಪ್ರಕಾರ ಪಾಲು ಮಾಡಿಕೊಟ್ಟಿರುತ್ತೇನೆ. ನಿಮ್ಮ ಮೃತ ಮಗ ಸುರೇಶನಿಗೆ ಎಷ್ಟು ಜಮೀನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಆತನು ನೌಕರಿ ಮಾಡುತ್ತಿದ್ದರಿಂದ ಆತನು ಯಾವುದೇ ಜಮೀನು ತನಗೆ ಬೇಡ ಎಂದು ಹೇಳಿದ ಕಾರಣ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಯನ್ನು ಬರೆದುಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಆಗ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಸುರೇಶ ಇವರು ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ನೆನಪಿರುವುದಿಲ್ಲ, 6-7 ವರ್ಷಗಳು ಆಗಿರಬಹುದು ಎಂದು ನುಡಿಯುತ್ತಾರೆ. ಅವರು ಸರಕಾರಿ ಕೆಲಸ ಮಾಡುತ್ತಿದ್ದರೋ ಅಥವಾ ಯಾವ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇಂಜಿನೀಯರ್ಸ ಆತನನ್ನು ಕರೆದುಕೊಂಡು ಹೋಗುತ್ತಿದ್ದರು, ಆದರೆ ಯಾವ

ಕೆಲಸ ಮಾಡುತ್ತಿದ್ದನು ಎಂದು ಗೊತ್ತಿರುವುದಿಲ್ಲ. ಅವರು ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರು ಎಷ್ಟನೇ ತರಗತಿಯವರೆಗೆ ಕಲಿತಿರುತ್ತಾರೆ ಎಂದರೆ ಸಾಕ್ಷಿಯು 10ನೇ ತರಗತಿಯವರೆಗೆ ಕಲಿತಿರುತ್ತಾನೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ತೀರಿಕೊಳ್ಳುವ ಸಮಯದಲ್ಲಿ ಅವರಿಗೆ ಎಷ್ಟು ವರ್ಷವಾಗಿತ್ತು ಎಂದರೆ ಸಾಕ್ಷಿಯು 75 ವರ್ಷ ಮೇಲ್ಪಟ್ಟು ಆಗಿತ್ತು ಎಂದು ನುಡಿಯುತ್ತಾರೆ. ಅವರು ಅನಾರೋಗ್ಯದಿಂದ ಬಳಲುತ್ತಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರಿಗೆ ಬಿಪಿ, ಶುಗರ್ ಇತ್ತು ಎಂದರೆ ಹೌದು ಎಂದು ನುಡಿಯುತ್ತಾರೆ. ಅವರ ಕೊನೆಯ ಕಾಲದಲ್ಲಿ ಅರಳುಮರಳು ಇತ್ತು ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರನ್ನು ನಮ್ಮ ಹುಡುಗನೇ ಹಿಡಿದುಕೊಂಡು ಓಡಾಡಿಸುತ್ತಿದ್ದನು.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/c. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.